ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಕರೆದು ಅದರಲ್ಲಿ ಸಂಪೂರ್ಣವಾಗಿ, ವಿವರವಾಗಿ ಚರ್ಚೆ ಮಾಡಿದ ನಂತರ Financial Advisory Committee ಮತ್ತು good consultant ಅಂದರೆ ಯೋಜನೆಗೆ ಒಬ್ಬ ಸಲಹೆಗಾರರನ್ನು ನೇಮಿಸಿ ಮೂರು ತಿಂಗಳೊಳಗಾಗಿ ಯಾವ್ಯಾವ section ನಲ್ಲಿ ಯಾವ ರೀತಿ ಅದನ್ನು ಅಭಿವೃದ್ಧಿಪಡಿಸಬಹುದು ಮತ್ತು ಹೊಸ ಯಂತ್ರೋಪಕರಣಗಳನ್ನು ತರಬಹುದು ಎನ್ನುವಂಥ ಮಾಹಿತಿಯನ್ನು ಆ ಸಭೆಗೆ ಕೊಡಲಿಕ್ಕೆ ಈಗಾಗಲೇ ಸೂಚನೆ ನೀಡಲಾಗಿದೆ. ಅದರ ಜೊತೆಗೆ, ಅಲ್ಲಿ ಕಾರ್ಖಾನೆಗಳು ಸುಸಜ್ಜಿತವಾಗಿ ನಡೆಯಲಿಕ್ಕೆ 50 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಮಾಡಿರುವ ವಿನಂತಿಯನ್ನು ಮಾನ್ಯ ಮುಖ್ಯಮಂತ್ರಿಯವರು Finance Department ಗೆ ಈಗಾಗಲೇ ಕಳುಹಿಸಿಕೊಟ್ಟಿದ್ದಾರೆ. ತಾವು ಹೇಳಿರುವ ಸಲಹೆಗಳನ್ನು ಬರುವ ದಿನಗಳಲ್ಲಿ ಗಮನದಲ್ಲಿಟ್ಟುಕೊಂಡು ಸಲಹೆಗಾರರ ವರದಿ ಬಂಧ ನಂತರ ನಿರ್ಧಾರಗಳನ್ನು ಕೈಗೊಳ್ಳುತ್ತೇವೆ.

ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದ ಕಾಮಗಾರಿಗಳು

2 (54) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ):– ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ಕೈಗೆತ್ತಿಕೊಂಡ ಸಣ್ಣ ನೀರಾವರಿ ಕಾಮಗಾರಿಗಳು ಯಾವುವು; ಅವುಗಳ ವೆಚ್ಚ ಎಷ್ಟು ಹಾಗೂ ಅವುಗಳು ಯಾವ ಹಂತದಲ್ಲಿವೆ?

ಆ) ಅವುಗಳಲ್ಲಿ ಪೂರ್ಣಗೊಂಡಿರುವ ಹಾಗೂ ಅಪೂರ್ಣಗೊಂಡಿರುವ ಕಾಮಗಾರಿಗಳೆಷ್ಟು;

ಇ) ಕಾಮಗಾರಿಗಳು ಅಪೂರ್ಣಗೊಳ್ಳಲು ಕಾರಣಗಳೇನು?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):–

ಅ) ಸಣ್ಣ ನೀರಾವರಿ ಇಲಾಖೆಯಿಂದ ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು 28 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಇವುಗಳ ವೆಚ್ಚ ಹಾಗೂ ಪ್ರಸ್ತುತ ಹಂತದ ವಿವರಗಳನ್ನು ಅನುಬಂಧ (1) ರಲ್ಲಿ ನೀಡಲಾಗಿದೆ.

ಆ) ಒಟ್ಟು ಕೈಗೊಳ್ಳಲಾದ 28 ಕಾಮಗಾರಿಗಳಲ್ಲಿ 17 ಕಾಮಗಾರಿಗಳು ಪೂರ್ಣಗೊಂಡಿದ್ದು, ಬಾಕಿ 11 ಕಾಮಗಾರಿಗಳು ವಿವಿಧ ಹಂತದಲ್ಲಿವೆ. ವಿವರಗಳನ್ನು ಅನುಬಂದ–1ರಲ್ಲಿ ನೀಡಲಾಗಿದೆ.

ಇ) ಬಾಕಿ 11 ಕಾಮಗಾರಿಗಳು ವಿವಿದ ಹಂತಗಳಲ್ಲಿ ಪ್ರಗತಿಯಲ್ಲಿದ್ದು, ಯಾವುದೇ ಕಾಮಗಾರಿಗಳು ಅಪೂರ್ಣಗೊಂಡಿರುವುದಿಲ್ಲ.

ಶ್ರೀ ಕಿಮ್ಮನೆ ರತ್ನಾಕರ್, ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿನ ಪ್ರ.ಸಂ. 54ಕ್ಕೆ ಅನುಬಂಧ–1. *(ರೂ. ಲಕ್ಷಗಳಲ್ಲಿ)*

ಕ್ರ. ಸಂ.	ತಾಲ್ಲೂಕು	ಕಾಮಗಾರಿಯ ಹೆಸರು	ವಜೂರಾದ ಪರಿಷ್ಕೃತ ಅಂದಾಜು ಮೊತ್ತ	ಒಟ್ಟಾರೆ ವೆಚ್ಚ	ಷರಾ
ಏತ ನೀರಾವರಿ ಯೋಜನೆಗಳು 2008–09					
1	ಶಿವಮೊಗ್ಗ	ದೊಡ್ಡಹಳ್ಳದಿಂದ ಕಾಕನಹಸೂಡಿ ಗ್ರಾಮಕ್ಕೆ ಏತ ನೀರಾವರಿ ಯೋಜನೆ	230.00	199.49	ಜಾಕ್ ವೆಲ್ ಮುಗಿದಿದೆ, ಇನ್ ಟೇಕ್ ವೆಲ್ ಮತ್ತು ವಿದ್ಯುತ್ ಸಂಪರ್ಕ ಕಾಮಗಾರಿ ಪ್ರಗತಿಯಲ್ಲಿದೆ.
ಪ್ರವಾಹ ನಿಯಂತ್ರಣ ಕಾಮಗಾರಿಗಳು					
2	ತೀರ್ಥಹಳ್ಳಿ	ಹೆದ್ದೂರು ಗ್ರಾಮದ ಮುಂಡುವಳ್ಳಿ ಕೋಗಿನ ಸರ್ವೆ ನಂ. 176ರ ಹತ್ತಿರ ಹಳ್ಳಕ್ಕೆ ಮಳೆ ಹಾನಿ ಕಾಮಗಾರಿ	20.00	19.55	ಮುಗಿದಿದೆ
3	ತೀರ್ಥಹಳ್ಳಿ	ಕುಶಾವತಿ ಹಳ್ಳಕ್ಕೆ ಪ್ರವಾಹ ರಕ್ಷಣಾ ಕಾಮಗಾರಿ	50.00	49.70	ಮುಗಿದಿದೆ
4	ತೀರ್ಥಹಳ್ಳಿ	ಅರಗ ಗ್ರಾಮ ಪಂಚಾಯತ್ ಗೋಪಿನಾಥ ಹಳ್ಳಕ್ಕೆ ಸಂರಕ್ಷಣಾ ಕಾಮಗಾರಿ	50.00	17.68	ಮುಗಿದಿದೆ
2009–10 ಕೆರೆಗಳ ಆಧುನೀಕರಣ					
5	ಹೊಸನಗರ	ಸೋನಾಲೆ ಗ್ರಾಮ ಪಂಚಾಯತ್ ನಲ್ಲಿರುವ ಸೋನಾಲೆ ಗುರುಗದ್ದೆ ಕೆರೆಯ ಅಭಿವೃದ್ಧಿ	25.00	0.13	ಮುಗಿದಿದೆ. ಅಂತಿಮ ಬಿಲ್ ನೀಡಬೇಕಿರುತ್ತದೆ.
6	ತೀರ್ಥಹಳ್ಳಿ	ತ್ರಿಯಂಬಕಪುರ ಕೆರೆ ಅಭಿವೃದ್ಧಿ	10.00	0.06	ಕೆರೆಯ ಹೂಳು ತೆಗೆಯಲಾಗಿದೆ, ಕೋಡಿ ನಿರ್ಮಿಸಲಾಗಿದೆ ಮತ್ತು ಏರಿ ದುರಸ್ತಿ ಪಡಿಸಿದ್ದು ಕಾಮಗಾರಿಯು ಮುಗಿಯುವ ಹಂತದಲ್ಲಿದೆ.
7	ತೀರ್ಥಹಳ್ಳಿ	ಕವಲೆದುರ್ಗ ಕೆರೆ ಅಭಿವೃದ್ಧಿ	40.00	35.41	ಮುಗಿದಿದೆ
8	ತೀರ್ಥಹಳ್ಳಿ	ಕುಡುಮಲ್ಲಿಗೆ ಗ್ರಾಮದ ಹತ್ತಿರ ಪಿಕಪ್ ಹಳ್ಳಕ್ಕೆ ಮಳೆಹಾನಿ ಕಾಮಗಾರಿ	20.00	15.05	ಮುಗಿದಿದೆ

		ಅಣೆಕಟ್ಟು ಮತ್ತು ಪಿಕಪ್			
9	ಹೊಸನಗರ	ಕಲ್ಲೂರು ಗ್ರಾಮದ ಹತ್ತಿರ ಕುಮುದ್ವತಿ ನದಿಗೆ ಬ್ಯಾರೇಜ್ ಮತ್ತು ತಡೆಗೋಡೆ ನಿರ್ಮಾಣ * 06/2009	101.00	114.00	ಮುಗಿದಿದೆ
10	ತೀರ್ಥಹಳ್ಳಿ	ಹುಂಚ ಹೋಬಳಿ ಹತ್ತಿರ ಹೆದ್ದಾರಿಪುರದ ಹತ್ತಿರ ಬ್ಯಾರೇಜ್ ನಿರ್ಮಾಣ	20.00	22.70	ಮುಗಿದಿದೆ
		ಏತ ನೀರಾವರಿ ಯೋಜನೆಗಳು			
11	ತೀರ್ಥಹಳ್ಳಿ	ಮಳಿಗೆ ಗ್ರಾಮ ಪಂಚಾಯ್ತಿ ಗೋಪಾಲಪುರ ಗ್ರಾಮಕ್ಕೆ ತುಂಗಾನದಿಯಿಂದ ಏತ ನೀರಾವರಿ ಯೋಜನೆ	15.00	10.74	ಮುಗಿದಿದೆ
		ಪ್ರವಾಹ ನಿಯಂತ್ರಣಾ ಕಾಮಗಾರಿಗಳು			
12	ತೀರ್ಥಹಳ್ಳಿ	ನೊಣಬೂರು ಗ್ರಾಮ ಪಂಚಾಯತಿ ಮತ್ತು ಅರಗ ಗ್ರಾಮ ಪಂಚಾಯತಿಯಲ್ಲಿ ಹರಿಯುವ ಗೌರಿಹಳ್ಳ ದಂಡೆಗೆ ಪ್ರವಾಹ ತಡೆಗೋಡೆ 0 ರಿಂದ 2 ಕಿ.ಮೀ.	50.00	27.21	ಮುಗಿದಿದೆ
13	ತೀರ್ಥಹಳ್ಳಿ	ಕುಡುಮಲ್ಲಿಗೆ ಗ್ರಾಮ ಪಂಚಾಯತ್ ಹುಂಡಿ ಕೋಳಿಹಳ್ಳಕ್ಕೆ ಸಂರಕ್ಷಣಾ ಕಾಮಗಾರಿ	15.00	13.91	ಮುಗಿದಿದೆ
14	ತೀರ್ಥಹಳ್ಳಿ	ನೊಣಬೂರು ಗ್ರಾ.ಪ. ಮತ್ತು ಅರಗ ಗ್ರಾಮ ಪಂಚಾಯಿತಿಯಲ್ಲಿ ಹರಿಯುವ ಗೌರಿಹಳ್ಳ ದಂಡೆಗೆ ಪ್ರವಾಹ ತಡೆಗೋಡೆ 2 ರಿಂದ 4 ಕಿ.ಮೀ.	50.00	22.36	ಮುಗಿದಿದೆ
		2010–11			
15	ತೀರ್ಥಹಳ್ಳಿ	ಕೊಳಗಿ ಬೈಲು ದಿಂಡಿನಕೆರೆ ಅಭಿವೃದ್ಧಿ (ಕಸಬ ಹೋಬಳಿ)	12.00	5.69	ಕೆರೆಯ ಹೂಳು ತೆಗೆಯಲಾಗಿದೆ, ಸ್ಲ್ಯೂಯೀಸ್ ನಿರ್ಮಿಸಲಾಗಿದೆ ಮತ್ತು ಏರಿ ದುರಸ್ತಿ ಪಡಿಸಿದ್ದು ಕಾಮಗಾರಿಯು ಮುಗಿಯುವ ಹಂದದಲ್ಲಿದೆ

		ಅಣೆಕಟ್ಟು ಮತ್ತು ಪಿಕಪ್			
16	ತೀರ್ಥಹಳ್ಳಿ	ಮುಕ್ತಿ ಹರಿಹರಪುರ ಗ್ರಾಮದ ಹತ್ತಿರ ಪಿಕಪ್ ನಿರ್ಮಾಣ	19.00	22.79	ಮುಗಿದಿದೆ
17	ತೀರ್ಥಹಳ್ಳಿ	ಸಾಲ್ಗಡಿ ಗ್ರಾ.ಪಂ. ಕಬಸೆ ಗ್ರಾಮದ ಕೂನ್ನತಿಕಾನು ಪರಿಶಿಷ್ಟಜಾತಿ ಜನಾಂಗದ ಜಮೀನಿಗೆ ನೀರಾವರಿಗಾಗಿ ಪಿಕಪ್ ನಿರ್ಮಾಣ	20.00	16.62	ಮುಗಿದಿದೆ
18	ತೀರ್ಥಹಳ್ಳಿ	ಹೊನ್ನತಾಳು ಗ್ರಾ.ಪಂ. ಶೀರೂರು ಗ್ರಾಮದ ಜಾವಗಲ್ಲು ಪರಿಶಿಷ್ಟ ಜಾತಿ ಜನಾಂಗದ ಜಮೀನಿಗೆ ನೀರಾವರಿಗಾಗಿ ಪಿಕಪ್ ನಿರ್ಮಾಣ	20.00	16.30	ಮುಗಿದಿದೆ
19	ಹೊಸನಗರ	ಹೆದ್ದಾರಿಪುರ ಗ್ರಾ.ಪಂ. ಕಲ್ಲೂರು ಸ.ನಂ. 178ರಲ್ಲಿ ಹಳ್ಳಕ್ಕೆ ತಡೆಗೋಡೆ ನಿರ್ಮಾಣ	20.00	4.27	ಮುಗಿದಿದೆ
		ಏತ ನೀರಾವರಿ ಯೋಜನೆಗಳು			
20	ತೀರ್ಥಹಳ್ಳಿ	ಬೆಜ್ಜವಳ್ಳಿ ಗ್ರಾ.ಪಂ. ಮಹಿಶಿ ಗ್ರಾಮದ ಹತ್ತಿರ ತುಂಗಾ ನದಿಗೆ ಏತ ನೀರಾವರಿ ನಿರ್ಮಾಣ	81.00	46.76	ಜಾಕ್‌ವೆಲ್ ಮುಗಿದಿದೆ, ಇನ್‌ಟೇಕ್ ವೆಲ್ ಮತ್ತು ವಿದ್ಯುತ್ ಸಂಪರ್ಕ ಕಾಮಗಾರಿ ಪ್ರಗತಿಯಲ್ಲಿದೆ
21	ತೀರ್ಥಹಳ್ಳಿ	ಹೆದ್ದೂರು ಹತ್ತಿರ ತುಂಗಾ ನದಿಗೆ ಏತ ನೀರಾವರಿ ನಿರ್ಮಾಣ	81.00	26.24	ಜಾಕ್‌ವೆಲ್ ಮುಗಿಯುವ ಹಂತದಲ್ಲಿದೆ, ಪೈಪ್ ಲೈನ್ ಕಾಮಗಾರಿ ಪೂರ್ಣಗೊಳಿಸಲಾಗಿದೆ
22	ತೀರ್ಥಹಳ್ಳಿ	ಕೋಮಾನೆ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ	76.00	34.42	93/10–11, ದಿನಾಂಕ 25–03–2011ರಲ್ಲಿ ಕಾರ್ಯಾದೇಶ ನೀಡಲಾಗಿದೆ. ಜಾಕ್‌ವೆಲ್ ಪ್ರಗತಿಯಲ್ಲಿದೆ, ವಿದ್ಯುತ್ ಸಂಪರ್ಕ ಕಾಮಗಾರಿ ಪ್ರಗತಿಯಲ್ಲಿದೆ
23	ತೀರ್ಥಹಳ್ಳಿ	ಕುಂದ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ	61.50	66.18	ಕಾಮಗಾರಿ ಮುಗಿದಿದೆ. ವಿದ್ಯುತ್ ಸಂಪರ್ಕ ನೀಡಬೇಕಿದೆ

24	ತೀರ್ಥಹಳ್ಳಿ	ಕೈಮರದ ಉಂಟೂರು ಕಟ್ಟೆ ಹತ್ತಿರ ಏತ ನೀರಾವರಿ ಯೋಜನೆ	110.00	17.93	94/10-11, ದಿನಾಂಕ 25-03-2011ರಲ್ಲಿ ಕಾರ್ಯಾದೇಶ ನೀಡಲಾಗಿದೆ. ನೆಲಮಟ್ಟದವರೆಗೆ ಜಾಕ್‌ವೆಲ್ ಪೂರ್ಣಗೊಂಡಿದ್ದು, ಪೈಪ್‌ಗಳನ್ನು ಸಂಗ್ರಹಿಸಲಾಗಿದೆ
25	ತೀರ್ಥಹಳ್ಳಿ	ಬೇಗುವಳ್ಳಿ ಗ್ರಾಮದ ದೇವಿಕೆರೆ ಮತ್ತು ಕಾನಕೆರೆ ಏತ ನೀರಾವರಿ ಯೋಜನೆ	161.00	2.89	22/11-12, ದಿನಾಂಕ 05-08-2011ರಲ್ಲಿ ಕಾರ್ಯಾದೇಶ ನೀಡಲಾಗಿದೆ. ನೆಲಮಟ್ಟದವರೆಗೆ ಜಾಕ್‌ವೆಲ್ ಪೂರ್ಣಗೊಂಡಿದ್ದು, ಪೈಪ್‌ಗಳನ್ನು ಸಂಗ್ರಹಿಸಲಾಗಿದೆ
26	ತೀರ್ಥಹಳ್ಳಿ	ಹೆಗ್ಗೊಡು ಗ್ರಾಮ ಮಾಲತಿ ನದಿಗೆ ಏತ ನೀರಾವರಿ ಯೋಜನೆ	144.00	2.89	23/11-12, ದಿನಾಂಕ 05-08-2011ರಲ್ಲಿ ಕಾರ್ಯಾದೇಶ ನೀಡಲಾಗಿದೆ. ಜಾಕ್‌ವೆಲ್ ಕೆಲಸ ಪ್ರಗತಿಯಲ್ಲಿದೆ
27	ತೀರ್ಥಹಳ್ಳಿ	ಕಾಸರವಳ್ಳಿ ಗ್ರಾಮದ ಹತ್ತಿರ ತುಂಗಾ ನದಿಗೆ ಏತ ನೀರಾವರಿ ಯೋಜನೆ	144.00	3.27	ದಿನಾಂಕ 15-11-11ರಲ್ಲಿ ಕಾರ್ಯಾದೇಶ ನೀಡಲಾಗಿದೆ. ಜಾಕ್‌ವೆಲ್ ಕೆಲಸ ಪ್ರಗತಿಯಲ್ಲಿದೆ.
28	ಹೊಸನಗರ	ಹುಂಚಹೋಬಳಿ ಕಲ್ಲೂರು ಗ್ರಾಮದ ಹತ್ತಿರ ಕುಮುದ್ವತಿ ನದಿಗೆ ಪಿಕಪ್ ನಿರ್ಮಿಸಿ ಏತ ನೀರಾವರಿ ಕಲ್ಪಿಸುವುದು	25.00	27.27	ಮುಗಿದಿದೆ

ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಮಂತ್ರಿಯವರು ಉತ್ತರ ಕೊಟ್ಟಿದ್ದಾರೆ. ಆದರೆ, ಪ್ರಗತಿಯಲ್ಲಿದೆ ಎಂದು item-wise ಉತ್ತರಗಳನ್ನು ಕೊಟ್ಟಿದ್ದಾರೆ. ವಾಸ್ತವದಲ್ಲಿ ಏನು ಮುಗಿದಿದೆ ಎಂದು ಇದೆ. ಅದರಲ್ಲಿ ಯಾವ ರೀತಿಯ ಫಲಿತಾಂಶ ಇಲ್ಲ. ಕೈಮರದ ಉಂಟೂರು ಕಟ್ಟೆ ಹತ್ತಿರ ಏತ ನೀರಾವರಿ ಮುಗಿದು ತುಂಬಾ ವರುಷಗಳಾಗಿವೆ. ಆದರೆ, ಇಲ್ಲಿಯವರೆಗೂ ಒಂದು drop ನೀರೂ ಸಹ ಯಾವ ಗದ್ದೆಗೂ ಬಂದಿಲ್ಲ. Pump-set ಕೆಳಗಡೆ ಇದೆ, ಹೊಳೆ ಮೇಲುಗಡೆ ಇದೆ. ಅದನ್ನು ಬದಲಾವಣೆ ಮಾಡುವುದಕ್ಕೆ ಸರ್ಕಾರದಿಂದ ಹಣ ಇಲ್ಲವೆಂದು ಕಳೆದ 7-8 ವರ್ಷಗಳಿಂದ, ಹೆಚ್ಚು ಕಡಿಮೆ 10-12 ವರುಷ ಆಯಿತು, ಉತ್ತರದಲ್ಲಿ ಮುಗಿದಿದೆ ಎಂದು ಇದೆ. ಆದರೆ, ಫಲಿತಾಂಶ zero. What should be

done? ಏತ ನೀರಾವರಿ ಯೋಜನೆಯಲ್ಲಿ ಕೆಲವು ಕಾಮಗಾರಿಗಳು ಮುಗಿದಾದ ಮೇಲೆ ಮುಂದೆ ಏನು? ಅದನ್ನು ನಿರ್ವಹಿಸುವವರು ಯಾರು? There is no delegation of entrustment of the work. ಅದನ್ನು ಗ್ರಾಮ ಪಂಚಾಯತಿಯವರಿಗೆ ವಹಿಸಿಕೊಡುತ್ತೀರೋ ಅಥವಾ ನಿಮ್ಮಂದ ಅದನ್ನು ಯಾರಿಗಾದರೂ ಅದನ್ನು ನಿರ್ವಹಣೆ ಮಾಡಲಿಕ್ಕೆ ಕೊಡುತ್ತೀರೋ, ತಾಲ್ಲೂಕು, ಜಿಲ್ಲಾ ಪಂಚಾಯತಿಗೆ ವಹಿಸುತ್ತೀರೋ? ಯಾರಿಗೂ ವಹಿಸಿಲ್ಲ. ಅದನ್ನು ಯಾರೂ ನಿರ್ವಹಣೆ ಮಾಡುತ್ತಿಲ್ಲ. ಇದೂ ಕೂಡ ಮುಗಿದಿದೆ ಎಂದು ಉತ್ತರ ಬಂದಿದೆ. ದೊಡ್ಡಹಳ್ಳದಿಂದ ಕಾಕನಹಸೂಡಿ ಗ್ರಾಮಕ್ಕೆ ಏತ ನೀರಾವರಿ ಯೋಜನೆ ಪ್ರಗತಿಯಲ್ಲಿದೆ ಎಂದಿದೆ. ಅಲ್ಲಿ ಕೆಲಸ ನಿಂತು ಹೋಗಿ ಸುಮಾರು 7–8 ವರ್ಷಗಳಾಗಿದೆ. ಅಲ್ಲಿ ಕೆಲಸ ಎನೂ ನಡೆಯುತ್ತಿಲ್ಲ. ಆದರೆ, ಪ್ರಗತಿಯಲ್ಲಿದೆ ಎಂದು ಇದೆ. ವಾಸ್ತವದಲ್ಲಿ ಇಲ್ಲಿಯವರೆಗೆ no work is being carried on. ಇದರಲ್ಲಿ ಬಹಳಷ್ಟು ಅದೇ ರೀತಿಯಾಗಿದೆ. ಪ್ರಗತಿಯಲ್ಲಿ ಏನಿದೆ ಆ ಪ್ರಗತಿಯಲ್ಲಿ ಎಲ್ಲ ನಿಂತುಹೋಗಿದೆ. work ಮಾಡುವುದಕ್ಕೆ ಹಣದ ಕೊರತೆಯೋ, ಏನೋ ಗೊತ್ತಿಲ್ಲ. ನಾನು KDP ಸಭೆಯಲ್ಲಿ ಪ್ರಶ್ನೆ ಕೇಳಿದ್ದೇನೆ. I am not getting proper answers from the officials. Item-wise ಬೇಕೆಂದರೆ ನಾನು ನಿರ್ದಿಷ್ಟವಾಗಿ ಹೇಳುತ್ತೇನೆ. Item-wise ತುಂಬಾ ಇವೆ. ಬೇಕಾದರೆ ಹೇಳುತ್ತೇನೆ. ಏತ ನೀರಾವರಿ ಯೋಜನೆ ಶಿವಮೊಗ್ಗದ ದೊಡ್ಡಹಳ್ಳದಿಂದ ಕಾಕನಹಸೂಡಿ ಗ್ರಾಮಕ್ಕೆ ಏತ ನೀರಾವರಿ ಅದರ ಕೆಲಸ ಹಾಗೆಯೇ ನಿಂತುಹೋಗಿದೆ. ಅದಕ್ಕೆ ಕೆಲವರು, forest problem, land problem ಇದೆ ಎಂದು ಹೇಳುತ್ತಾರೆ. ಈಗಾಗಲೇ ತುಂಬಾ ಹಣ ಖರ್ಚು ಮಾಡಿ ಕೂಡ it is not being utilized. ನಮ್ಮ ರೈತರಿಗೆ ಯಾವುದೇ ಅನುಕೂಲವಾಗಿಲ್ಲ. ಎರಡನೆಯದಾಗಿ, ಕೆರೆಗಳ ಆಧುನೀಕರಣದಲ್ಲಿ ತೀರ್ಥಹಳ್ಳಿಯ ತ್ರಿಯಂಬಕಪುರ ಕೆರೆ ಅಭಿವೃದ್ಧಿ ಇದರಲ್ಲಿ ಇನ್ನೂ work complete ಆಗಿಲ್ಲ. Item No. 20 ತೀರ್ಥಹಳ್ಳಿ–ಬೆಜ್ಜವಳ್ಳಿ ಗ್ರಾ.ಪಂ. ಮಹಿಷಿ ಗ್ರಾಮದ ಹತ್ತಿರ ತುಂಗಾ ನದಿಗೆ ಏತ ನೀರಾವರಿ ನಿರ್ಮಾಣ ಈ ಕೆಲಸ ಪ್ರಗತಿಯಲ್ಲಿದೆ ಎಂದು ಹೇಳಿದ್ದಾರೆ. There is no coordination between the Government authorities. ಪ್ರತಿ ಸಂದರ್ಭದಲ್ಲಿ KEB ಯವರು connection ಕೊಡುವುದಿಲ್ಲ, ಹಣ ಕಟ್ಟಿಲ್ಲವೆಂದು ಹೇಳುತ್ತಾರೆ ಅಥವಾ ನಾವು ಕಟ್ಟಿದ್ದೇವೆ ಅವರು ಕೊಡುತ್ತಿಲ್ಲವೆಂದು ಹೇಳುತ್ತಾರೆ. KEB connection ಗೆಂದೇ ಏಳೆಂಟು ಹಾಗೆಯೇ pending ನಲ್ಲಿದೆ. ನಾನು ಪ್ರತಿ KDP ಸಭೆಯಲ್ಲಿ ಕೇಳಿದರೂ ಸಹ ಇವರು ಹಣ ಕಟ್ಟುವುದಿಲ್ಲವೆಂದು ಹೇಳುತ್ತಾರೆ. There is a lapse on the side of the Irrigation department ಎಂದು ಹೇಳುತ್ತಾರೆ. But totally,

result is zero. Item No. 22 ತೀರ್ಥಹಳ್ಳಿ ಕೋಮಾನೆ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ಅಲ್ಲಿಯೂ same problem ಇದೆ. KEB ಮತ್ತು ನಿಮ್ಮ department ಮಧ್ಯೆ ಇರುವ ವ್ಯತ್ಯಾಸ ಏನಿದೆ ಅದಕ್ಕೂ ನಮಗೂ ಸಂಬಂಧವಿಲ್ಲ. ಹಣ ಕೊಟ್ಟರೂ ಕೂಡ ಏನೂ ಕೆಲಸವಾಗುತಿಲ್ಲ. ಅಲ್ಲಿ ಕೆಲಸ ನಿಂತು ಹೋಗಿದೆ. ಈಗಾಗಲೇ ಹೇಳಿದ ಹಾಗೆ Item No. 24 ತೀರ್ಥಹಳ್ಳಿ–ಕೈಮರದ ಉಂಟೂರು ಕಟ್ಟೆ ಹತ್ತಿರ ಏತ ನೀರಾವರಿ ಯೋಜನೆ ಅಲ್ಲಿ ಈಗಾಗಲೇ complete ಆಗಿ tank ಆಗಿದೆ, pump-set ಇದೆ. ಆದರೆ, ಒಂದು drop ನೀರೂ ಸಹ ಇಲ್ಲಿಯವರೆಗೆ ಯಾವ ಗದ್ದೆಗೂ ಹರಿದಿಲ್ಲ. ಈ ವಿಷಯವನ್ನು ನಾನು ಆಯ್ಕೆಯಾದ ದಿನದಿಂದ ಇಲ್ಲಿಯವರೆಗೆ ಸಭೆಯಲ್ಲಿ ಕೇಳಿದ್ದೇನೆ. ನೀರು ಹೋಗುತ್ತದೆ ಎಂದು ಹೇಳುತ್ತಾರೆ. ಸ್ಥಳಕ್ಕೆ ಹೋಗಿ ಕೇಳಿದರೆ ಇಲ್ಲಿಯವರೆಗೆ ಒಂದು drop ನೀರು ಸಹ ಕೊಟ್ಟಿಲ್ಲವೆಂದು ರೈತರು ಹೇಳುತ್ತಾರೆ. What is the defect? Engineers ಅನ್ನು ಕೇಳಿದರೆ, Pump-set ಒಳಗೆ ನೀರು ಹೋಗುತ್ತಿದೆ, ಅದನ್ನು ನಾವು ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. There should be an alternative arrangement. Financial problem ಇದ್ದರೆ ಅದನ್ನು additional grant ಕೊಟ್ಟು ಸರಿಪಡಿಸುವ ಕೆಲಸ ಮಾಡಬೇಕು. KDP ಸಭೆಯಲ್ಲೂ, ಶಾಸನಸಭೆಯಲ್ಲೂ ಉತ್ತರ ಸಿಗುವುದಿಲ್ಲವೆಂದರೆ, where we have to get the answer?

ಶ್ರೀ ಗೋವಿಂದ ಎಂ.ಕಾರಜೋಳ : ಎಲ್ಲ ಕಾಮಗಾರಿಗಳು ಮುಗಿದಿವೆ ಎಂದು ನಾವು ಹೇಳಿಲ್ಲ. 8 ಕಾಮಗಾರಿಗಳು lift irrigation ನಿಂದ ವಿಳಂಬವಾಗಿ ಪ್ರಾರಂಭವಾಗಿವೆ. ಯಾರೂ tender ಹಾಕದ ಕಾರಣದಿಂದಾಗಿ ನಾಲ್ಕೈದು ಸಾರಿ ಟೆಂಡರ್ ಕರೆದು ವಿಳಂಬವಾಗಿ ಪ್ರಾರಂಭವಾಗಿದೆ. ಯಾವುದು ಹಳೆಯ scheme ಇದೆ, 10–12 ವರ್ಷಗಳಿಂದ ನೀರು ಬಂದಿಲ್ಲ ಎಂದು ಹೇಳುತ್ತಾರೆ, ಆ ಬಗ್ಗೆ ಕೂಡಲೆ ನಾನು ನಮ್ಮ ಮುಖ್ಯ ಇಂಜಿನಿಯರ್ ರವರನ್ನು ಸ್ಥಳಕ್ಕೆ ಕಳುಹಿಸಿ, inspection ಮಾಡಿಸಿ pump-set ಬದಲಾವಣೆ ಮಾಡಬೇಕಾಗಿದ್ದರೆ ಅಥವಾ ಸ್ಥಳಾಂತರ ಮಾಡಬೇಕಾಗಿದ್ದರೆ ಖಂಡಿತವಾಗಿಯೂ ಮಾಡಿಸಿಕೊಡುತ್ತೇನೆ. ಇನ್ನುಳಿದವು ಯಾವುದಾದರೂ ಇದ್ದರೆ ನೀವು specific ಆಗಿ ಬರೆದು ಕೊಡಿ. ನಾನು ನಮ್ಮ ಮುಖ್ಯ ಇಂಜಿನಿಯರ್ ಮತ್ತು ಸಂಬಂಧಪಟ್ಟ Executive Engineer ಅನ್ನು, ನಿಮ್ಮನ್ನೂ ನನ್ನ ಛೇಂಬರ್‌ಗೆ ಕರೆದು ಮೀಟಿಂಗ್ ಮಾಡಿ final ಮಾಡಿಸಿಕೊಡುತ್ತೇನೆ. ಆಗಬಹುದೇ?

ಶ್ರೀ ಕಿಮ್ಮನೆ ರತ್ನಾಕರ್ : ಆಗಬಹುದು.

ಬೃಹತ್ ನೀರಾವರಿ ಯೋಜನೆ

3 (121) ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಹೊಸದುರ್ಗ) :– ಜಲ ಸಂಪನ್ಮೂಲ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಕಳೆದ ಮೂರು ವರ್ಷಗಳಲ್ಲಿ ಹೊಸದಾಗಿ ಕೈಗೆತ್ತಿಕೊಂಡಿರುವ ಹೊಸ ನೀರಾವರಿ ಯೋಜನೆಗಳೆಷ್ಟು, ಯಾವುವು? ಅದಕ್ಕೆ ಒದಗಿಸಿದ ಅನುದಾನವೆಷ್ಟು ;

(ಆ) ಈಗಾಗಲೇ ಹಳೆಯ ಹಾಲಿ ನಡೆಯುತ್ತಿರುವ ಬೃಹತ್ ಯೋಜನೆಗಳೆಷ್ಟು, ಯಾವುವು? ಎಷ್ಟೆಷ್ಟು ವರ್ಷಗಳಿಂದ ಚಾಲನೆಯಲ್ಲಿವೆ. ಒದಗಿಸಿದ ಅನುದಾನವೆಷ್ಟು ಹಾಗೂ ಅವುಗಳನ್ನು ಪೂರ್ಣಗೊಳಿಸಲು ಇರುವ ಕಾಲಾವಧಿ ಎಷ್ಟು ;

(ಇ) ಅಪ್ಪರ್ ಭದ್ರಾ ಯೋಜನೆಗೆ ಒದಿಗಿಸಿದ ಒಟ್ಟು ಅನುದಾನವೆಷ್ಟು ಹಾಗೂ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಅನುದಾನವೆಷ್ಟು

(ಈ) ಸದರಿ ಯೋಜನೆಗೆ ಅನುದಾನ ಹೆಚ್ಚಿಸಲು ಕಾರಣವೇನು?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು) : ಕಳೆದ ಮೂರು ವರ್ಷಗಳಲ್ಲಿ ಹೊಸದಾಗಿ ಕೈಗೆತ್ತಿಕೊಂಡಿರುವ ಹೊಸ ನೀರಾವರಿ ಯೋಜನೆಗಳ ಸಂಖ್ಯೆ : 15 ಹಾಗೂ ಅವುಗಳಿಗೆ ಒದಗಿಸಿದ ಅನುದಾನ ರೂ. 1376.09 ಕೋಟಿಗಳು. (ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ).

(ಆ) ಪ್ರಗತಿಯಲ್ಲಿರುವ ಬೃಹತ್ ನೀರಾವರಿ ಯೋಜನೆಗಳ ಒಟ್ಟು ಸಂಖ್ಯೆ : 22. ಪ್ರಸಕ್ತ ಸಾಲಿನಲ್ಲಿ ಒದಗಿಸಲಾದ ಅನುದಾನ ರೂ. 4167.92 ಕೋಟಿಗಳು. (ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ).

(ಇ) ಭದ್ರಾ ಮೇಲ್ದಂಡೆ ಯೋಜನೆಗೆ ಕಳೆದ ಮೂರು ವರ್ಷಗಳಲ್ಲಿ ಒದಗಿಸಲಾದ ಒಟ್ಟು ಅನುದಾನ ರೂ. 343.83 ಕೋಟಿಗಳು ಹಾಗೂ ಬಿಡುಗಡೆಯಾದ ಅನುದಾನ / ವೆಚ್ಚ ರೂ. 305.55 ಕೋಟಿಗಳು.

(ಈ) ಸದರಿ ಯೋಜನೆಗೆ ಪ್ರಗತಿಯನುಸಾರ ಹಾಗೂ ಲಭ್ಯತೆ ಮೇರೆಗೆ ಅನುದಾನ ಒದಗಿಸಲಾಗುತ್ತಿದೆ.